ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 – 260969
ಅಕ್ಟೋಬರ್-ಡಿಸೆಂಬರ್ 2009

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ: dvgtkvk@yahoo.com
ಸಂಪುಟ-3, ಸಂಚಿಕೆ-1

## ಸಿಂಚನಕ್ಕೆ ಮುನ್ನ

**ಪ್ರಿಯ ಬಂಧುಗಳೇ,**

ಕಳೆದ ಮೂರು ತಿಂಗಳುಗಳು ವಿಶೇಷವಾಗಿದ್ದವು. ನಮ್ಮ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಸ್ತರಣಾ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ನೀಡಿದ್ದ ಸಮಯವದು. ಅಕ್ಟೋಬರ್ 12 ರಿಂದ 16 ರ ವರೆಗೆ ಕೃಷಿ ತಂತ್ರಜ್ಞಾನ ಸಪ್ತಾಹವನ್ನು ಕೃಷಿ ಇಲಾಖೆಯ ಸಹಯೋಗದಲ್ಲಿ ಆಚರಿಸಿದೆವು. ಆಹ್ವಾನಿತ ಉಪನ್ಯಾಸ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕಾ ತಾಕುಗಳು ಮುಖ್ಯ ಆಕರ್ಷಣೆಗಳಾಗಿದ್ದು, 700 ಕ್ಕೂ ಹೆಚ್ಚಿನ ರೈತ ಮಿತ್ರರು ಇದರ ಸದುಪಯೋಗ ಪಡೆದುಕೊಂಡರು. ಇದರ ಸಮಾರೋಪ ಸಮಾರಂಭವು "**ವಿಶ್ವ ಆಹಾರ ದಿನಾಚರಣೆ**" ಯೊಂದಿಗೆ ಸಮನ್ವಯಸಿದ್ದು, ಹೆಚ್ಚಿನ ಆಕರ್ಷಣೆಯಾಗಿತ್ತು. ಆಹಾರ ಸುರಕ್ಷತೆ ಎನ್ನುವ ಮಹಾ ಪ್ರಶ್ನೆ ಇಡೀ ಭೂಮಂಡಲವನ್ನು ಕಾಡುತ್ತಿರುವ ಈ ಕ್ಲಿಷ್ಟ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರೈತರ ಪಾತ್ರ ಬಹಳವೇ ಸೂಕ್ಷ್ಮ ಎನ್ನುತ್ತಾ, "**ಪ್ರತಿಕೂಲಗಳ ವಿಶ್ವವಿದ್ಯಾನಿಲಯ**" ಗಳಲ್ಲಿ ಪದವೀಧರರಾಗಿ ಹೊರ ಹೊಮ್ಮುತ್ತಿರುವ ರೈತ ಬಂಧುಗಳಿಗೆ Hats off ಎಂದರು ನಮ್ಮ ವಲಯ ಯೋಜನಾ ನಿರ್ದೇಶಕರಾದ ಡಾ. ಪ್ರಭುಕುಮಾರ್ ಎಸ್. ರವರು. ನಂತರ ನವೆಂಬರ್ 30 ಮತ್ತು ಡಿಸೆಂಬರ್ 3 ರಂದು ಅನುಕ್ರಮವಾಗಿ "A to Z about Azolla" ಮತ್ತು "ಬಾಳೆ ಬೆಳೆಯಲ್ಲಿ ನಿಖರ ಕೃಷಿ" ಬಗ್ಗೆ ಕಾರ್ಯಾಗಾರಗಳನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಯೋಗದಲ್ಲಿ ಅತ್ಯಂತ ಯಶಸ್ವಿಯಾಗಿ ಆಯೋಜಿಸಿದ್ದೆವು. ತಮಿಳುನಾಡಿನ ಕೃಷ್ಣಗಿರಿಯ ರೈತರಾದ ಶ್ರೀ ರಾಮ ರೆಡ್ಡಿಯವರ ಉಪನ್ಯಾಸ ಎರಡನೇ ಕಾರ್ಯಾಗಾರದ highlight ಆಗಿತ್ತು. ನೆರೆದ ರೈತರು ಸಂಜೆ 7 ಗಂಟೆಯಾದರೂ ಖುರ್ಚಿ ಬಿಟ್ಟು ಮೇಲೇಳದ್ದಿದ್ದುದು ಕಾರ್ಯಕ್ರಮದ ಯಶಸ್ಸಿಗೆ ಹಿಡಿದ ಕನ್ನಡಿ.

ನಂತರ, ಕೋಯುಮತ್ತೂರಿನ ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯದಲ್ಲಿ 4ನೇ ಕೆವಿಕೆ ಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಬಂದೆವು. ತದನಂತರ ಮೈಸೂರಿನ ಜೆ. ಎಸ್. ಎಸ್., ಕೆವಿಕೆ ಯಲ್ಲಿ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ ನಡೆದು, ಅದರಲ್ಲಿ ನಮ್ಮ ಕೆವಿಕೆ ಯ ವಾರ್ಷಿಕ ವರದಿ ಮಂಡನೆ ಮಾಡಿದೆವು. ಏತನ್ಮಧ್ಯೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಮೇಳದಲ್ಲಿ ನಮ್ಮ ಕೆವಿಕೆಯ ಮಳಿಗೆಯನ್ನು ಕೂಡ ಹಾಕಿದ್ದೆವು. ಜೊತೆಗೆ 7 ನೇ SAC ಸಭೆ ಕೂಡ ಮಾಡಿದೆವು. ಈ ನಡುವೆ, ಜೈವಿಕ ತಂತ್ರಜ್ಞಾನ ಇಲಾಖೆಯ ಅನುದಾನದಲ್ಲಿ ಅನುಷ್ಠಾನಗೊಳ್ಳುತ್ತಿರುವ Rural Livelihood Security ಯೋಜನೆಗೆ ಸಾಕಷ್ಟು ಪ್ರಗತಿ ಚಾಲನೆ ನೀಡಿದೆವು.

ಹಿಂಗಾರಿನಲ್ಲಿ ನಮ್ಮ ಜಿಲ್ಲೆಯಲ್ಲಿ ಕೃಷಿ ಚುಟುವಟಿಕೆಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ಎಲ್ಲರೂ ಸುಗ್ಗಿಯಲ್ಲಿ ನಿರತರಾಗುತ್ತಾರೆ. ಎಲ್ಲೋ ಸ್ವಲ್ಪ ಮಂದಿ ಜೋಳ, ಕಡ್ಲೆಕಾಳು, ಸೂರ್ಯಕಾಂತಿ ಬಿತ್ತುತ್ತಾರೆ. ರೈತಮಿತ್ರರಿಗೆ Mobile Phone ಮೂಲಕ ಮಾಹಿತಿ ಸಂದೇಶಗಳನ್ನು ಬಿತ್ತರಿಸುವ ತಂತ್ರಜ್ಞಾನವನ್ನು ನಮ್ಮ ಸಹೋದ್ಯೋಗಿ ಮಿತ್ರರು ಅಳವಡಿಸಿದ್ದಾರೆ. ಮುಂಗಾರಿನ ಯೋಜನೆಗಳ ಫಲಿತಾಂಶಗಳ ಸಂಗ್ರಹಣೆ, ಕ್ರೋಢಿಕರಣ ಮತ್ತು ತುಲನಾ ಕಾರ್ಯದಲ್ಲಿ ನಮ್ಮ ತಂಡ ಈಗ ಮಗ್ನ. ಬರುವ ತಿಂಗಳುಗಳೊಳಗೆ ವಿಶೇಷ ಕಾರ್ಯಯೋಜನೆ ರೂಪಿಸಲು (ಮುಂದಿನ ವಾರ್ಷಿಕ ಯೋಜನೆಗೆ) ನಾನಾಗಲೇ ತಾಕೀತು ಮಾಡಿದ್ದೇನೆ. ವರ್ಷ ಕೊನೆಗೊಳ್ಳುತ್ತಿರುವಾಗ ಚಳಿ ಆವರಿಸಿಕೊಳ್ಳುತ್ತಿದೆ. ಬೇಸಿಗೆ ಭತ್ತ ಬೆಳೆಯಲು ಕಾಲುವೆ ನೀರಿಗೆ ರೈತರೆಲ್ಲರ ನಿರೀಕ್ಷಣೆ. ಓಹ್! ಹೊಸ ವರ್ಷ ಆಗಮಿಸಿದೆ **2010**. ನಿಮಗೆಲ್ಲರಿಗೂ ಶುಭಾಶಯಗಳು. ಕೃಷಿ ಕ್ಷೇತ್ರದಲ್ಲಿ ಒಂದಲ್ಲ ಒಂದು ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವ ನಮ್ಮೆಲ್ಲರಿಗೆ ಈ ಹೊಸ ವರ್ಷವು ಹೊಸ ಸ್ಪರ್ಧೆಗಳನ್ನು ಒಡ್ಡಲಿ, ಎದುರಿಸುವ ತಾಕತ್ತನ್ನೂ ನೀಡಲಿ ಎಂದು ಹಾರೈಸಿಕೊಳ್ಳೋಣ. ನಮಸ್ಕಾರ

–ಡಾ. ದೇವರಾಜ ಟಿ.ಎನ್.

## ಆಚರಿಸಿದ ದಿನಗಳು

- ತರಳಬಾಳು ಕೃಷಿ ವಿಜ್ಞಾನ ಕೇಂದ್ರದ 7ನೇ 'ವೈಜ್ಞಾನಿಕ ಸಲಹಾ ಸಮಿತಿ' ಸಭೆಯು ದಿನಾಕ 29-11-2009 ರಂದು ನೆರವೇರಿತು. ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ. ಎನ್ ರವರು ಕೇಂದ್ರದ ಹಿಂದಿನ 6 ತಿಂಗಳಲ್ಲಿ (ಮುಂಗಾರು) ಹಮ್ಮಿಕೊಂಡಿದ್ದ ಕಾರ್ಯ ಚಟುವಟಿಕೆಗಳನ್ನು ಹಾಗೂ ಮುಂದಿನ 6 ತಿಂಗಳ (ಹಿಂಗಾರು) ಕ್ರಿಯಾ ಯೋಜನೆಯನ್ನು ಮಂಡಿಸಿದರು. ನಂತರ ಚರ್ಚೆಯ ಮೂಲಕ ಎಲ್ಲಾ ಸಮಿತಿಯ ಸದಸ್ಯರಿಂದ ಸೂಕ್ತ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲಾಯಿತು.







## ವಿಶ್ವ ಆಹಾರ ದಿನಾಚರಣೆ

ಕೃಷಿ ವಿಜ್ಞಾನ ಕೇಂದ್ರ,ಕೃಷಿ ಇಲಾಖೆ ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 16 ನೇ ಶುಕ್ರವಾರ ಹಮ್ಮಿಕೊಂಡಿದ್ದ 'ವಿಶ್ವ ಆಹಾರ ದಿನಾಚರಣೆ'ಯನ್ನು ಡಾ. ಪ್ರಭುಕುಮಾರ್ ಎಸ್. ವಲಯ ಯೋಜನಾ ನಿರ್ದೇಶಕರು, ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು ಇವರು ಉದ್ಘಾಟಿಸಿದರು.

ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 12 ರಿಂದ 16 ರ ರವರೆಗೆ ಕೇಂದ್ರದಲ್ಲಿ 'ಕೃಷಿ ತಂತ್ರಜ್ಞಾನ ಸಪ್ತಾಹ' ಆಚರಿಸಲಾಯಿತು.



## ಜೈವಿಕ ಗೊಬ್ಬರ ಕುರಿತು ಕಾರ್ಯಾಗಾರ

❖ ದಿನಾಂಕ 30-11-2009 ರಂದು 'ಅಝೋಲ್ಲಾ- ಜಾನುವಾರುಗಳಿಗೆ ಪೌಷ್ಠಿಕ ಆಹಾರ ಹಾಗೂ ಜೈವಿಕ ಗೊಬ್ಬರ' ಕುರಿತು ಕಾರ್ಯಾಗಾರವನ್ನು ಕದಳೀವನದಲ್ಲಿ ತರಳಬಾಳು ಕೆ.ವಿ.ಕೆ. ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರುಗಳ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ವಿವಿಧ ತಾಲೂಕುಗಳಿಂದ ಬಂದ 120 ಕ್ಕೂ ಹೆಚ್ಚು ರೈತರು ಭಾಗವಹಿಸಿ, ಕಾರ್ಯಾಗಾರದ ಪ್ರಯೋಜನೆಯನ್ನು ಪಡೆದುಕೊಂಡಿರುತ್ತಾರೆ.





## ಮಹಿಳಾ ಮತ್ತು ರೈತ ದಿನಾಚರಣೆ

❖ ಡಿಸೆಂಬರ್ 4 ರಂದು ಕೇಂದ್ರದಲ್ಲಿ ಹಮ್ಮಿಕೊಂಡ 'ಕೃಷಿಯಲ್ಲಿ ಮಹಿಳಾ ದಿನಾಚರಣೆ' ಯನ್ನು ಹರಿಹರ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆರೊಂದಿಗೆ ಆಚರಿಸಲಾಯಿತು.

❖ ಡಿಸೆಂಬರ್ 23 ರಂದು 'ರೈತ ದಿನಾಚರಣೆ'ಯನ್ನು ಜಗಳೂರು ತಾಲ್ಲೂಕು ಮುಸ್ಟೂರಿನಲ್ಲಿ ಆಚರಿಸಲಾಯಿತು.

❖ ದಿನಾಂಕ 3-12-2009 ರಂದು 'ತೋಟಗಾರಿಕಾ ಬೆಳೆಗಳಲ್ಲಿ ನಿಖರ ಕೃಷಿ' ಕುರಿತು ಕಾರ್ಯಾಗಾರವನ್ನು ಕದಳೀವನದಲ್ಲಿ ತರಳಬಾಳು ಕೆ.ವಿ.ಕೆ. ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರುಗಳ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ವಿವಿಧ ತಾಲೂಕುಗಳಿಂದ ಬಂದ 120 ಕ್ಕೂ ಹೆಚ್ಚು ರೈತರು ಭಾಗವಹಿಸಿ, ಕಾರ್ಯಾಗಾರದಲ್ಲಿ ತಾಂತ್ರಿಕ ಮಾಹಿತಿ ಪಡೆದುಕೊಂಡರು.

❖ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರು ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ ಇವರ ಪ್ರಾಯೋಜಿತ ಯೋಜನೆ 'ಜೀವನೋಪಾಯಕ್ಕಾಗಿ ಮಧ್ಯ ಕರ್ನಾಟಕದಲ್ಲಿ ಜೈವಿಕ ತಂತ್ರಜ್ಞಾನದ ಮೂಲಕ ಜೈವಿಕ ಸಂಪನ್ಮೂಲ ಸಂಕೀರ್ಣ ಸ್ಥಾಪನೆ' ಅಡಿಯಲ್ಲಿ ಫಲಾನುಭವಿಗಳು ಸ್ಥಾಪಿಸಲಾಗುವ ಘಟಕಗಳಿಗೆ ಚೆಕ್ ವಿತರಣಾ ಕಾರ್ಯಕ್ರಮವನ್ನು ಆವರಗೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಇವರ ಜಂಟಿಯಾಗಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ದಾವಣಗೆರೆ ಸಂಸದರಾದ ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್ವರ್‌ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಕೃಷಿ ಸಚಿವರಾದ ಸನ್ಮಾನ್ಯ ಶ್ರೀ ಎಸ್. ಎ. ರವೀಂದ್ರನಾಥ್ ರವರು ಭಾಗವಹಿಸಿದರು.

## ಕೇಂದ್ರದ ತಜ್ಞರು ಭಾಗವಹಿಸಿದ ಕಾರ್ಯಾಗಾರಗಳು/ ಕಮ್ಮಟಗಳು / ವಿಚಾರ ಸಂಕಿರಣಗಳು / ಸಭೆಗಳು/ ತರಬೇತಿ ಕಾರ್ಯಕ್ರಮಗಳು:

❖ ದಿನಾಂಕ 22-10-2009 ರಂದು ಶ್ರೀ ತರಳಬಾಳು ಸಂಸ್ಥೆಯ 'ಶ್ರೀ ಚನ್ನಪ್ಪ ಪದವಿ ಪೂರ್ವ ಕಾಲೇಜು' ಇವರು ಬಾವಿಹಾಳ್ ಗ್ರಾಮದಲ್ಲಿ ಆಯೋಜಿಸಿದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದಲ್ಲಿ 'ಹಿಂಗಾರು ಮತ್ತು ಬೇಸಿಗೆ ಬೆಳೆಗಳಲ್ಲಿ ಬೇಸಾಯ ತಾಂತ್ರಿಕತೆಗಳು ಮತ್ತು ಸಮಗ್ರ ಪೀಡೆ ನಿರ್ವಹಣೆ' ಕುರಿತು ಮಲ್ಲಿಕಾರ್ಜುನ ಬಿ.ಓ. ಮತ್ತು ಪ್ರಸನ್ನಕುಮಾರ್ ಎನ್. ರವರು ತರಬೇತಿಯನ್ನು ನೀಡಿರುತ್ತಾರೆ.

❖ ದಿನಾಂಕ 26-10-2009 ರಂದು ಅಣಜಿಗೆರೆ, ಹರಪನಹಳ್ಳಿ ತಾಲೂಕಿನ ರೈತರ ಜಮೀನಿನಲ್ಲಿ 'ಬಿಟಿ ಹತ್ತಿ ಬೆಳೆಯ ಕ್ಷೇತ್ರೋತ್ಸವ'ವನ್ನು ಆಚರಿಸಲಾಯಿತು.

❖ ದಿನಾಂಕ 30-10-2009 ರಂದು ಶ್ರೀ ತರಳಬಾಳು ಸಂಸ್ಥೆಯ 'ಶ್ರೀ ಲಿಂಗಯ್ಯ ಪದವಿ ಪೂರ್ವ ಕಾಲೇಜು' ಇವರು ಸಾಸಲು ಗ್ರಾಮದಲ್ಲಿ ಆಯೋಜಿಸಿದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದಲ್ಲಿ 'ಸುಧಾರಿತ ತೋಟಗಾರಿಕಾ ಪದ್ಧತಿಗಳು ಹಾಗೂ ಪಶುಸಂಗೋಪನೆಯಲ್ಲಿ ಆಧುನಿಕ ಬೆಳವಣಿಗೆಗಳು' ಕುರಿತು ಬಸವನಗೌಡ ಎಂ.ಜಿ. ಮತ್ತು ಡಾ. ಜಯದೇವಪ್ಪ ಜಿ.ಕೆ. ರವರು ತರಬೇತಿಯನ್ನು ನೀಡಿರುತ್ತಾರೆ.

❖ ಮಾದರಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ದಾವಣಗೆರೆ ಇವರು 'ರಾಷ್ಟ್ರೀಯ ತೋಟಗಾರಿಕಾ ಮಿಷನ್' ಅಡಿಯಲ್ಲಿ ದಿನಾಂಕ 31-10-09 ರಂದು ಹರಿಹರ ತಾಲೂಕಿನ ಬೆಳ್ಳೂಡಿ ಮತ್ತು 09-11-09 ರಂದು ದಾವಣಗೆರೆ ತಾಲೂಕಿನ ಹೆಮ್ಮನಬೇತೂರು ಗ್ರಾಮಗಳಲ್ಲಿ ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಬಸವನಗೌಡ ಎಂ.ಜಿ. ಇವರು 'ತೋಟಗಾರಿಕಾ ಬೆಳೆಗಳಲ್ಲಿ ಸಾವಯವ ಕೃಷಿ' ಕುರಿತು ಉಪನ್ಯಾಸವನ್ನು ನೀಡಿರುತ್ತಾರೆ.

❖ ದಿನಾಂಕ 6 ರಿಂದ 8 ನವಂಬರ್ 2009 ರ ವರೆಗೆ ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯ, ಕೊಯಮತ್ತೂರಿನಲ್ಲಿ ನಡೆದ **'4ನೇ ರಾಷ್ಟ್ರೀಯ ಕೆವಿಕೆಗಳ ಸಮ್ಮೇಳನ'** ದಲ್ಲಿ ಕೇಂದ್ರದ ಮುಖ್ಯಸ್ಥರಾದ ಡಾ॥ ದೇವರಾಜ ಟಿ. ಎನ್.ಮತ್ತು ಆಡಳಿತ ಮಂಡಳಿ ಸದಸ್ಯರಾದ ಡಾ. ಕೆ.ಪಿ. ಬಸವರಾಜ ರವರು ಭಾಗವಹಿಸಿದ್ದರು.

❖ ದಿನಾಂಕ 7-11-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ "ದ್ವೈಮಾಸಿಕ ಕಾರ್ಯಾಗಾರ"ದಲ್ಲಿ ಕೇಂದ್ರದ ಮಲ್ಲಿಕಾರ್ಜುನ ಬಿ.ಓ., ಪ್ರಸನ್ನಕುಮಾರ್ ಎನ್., ಬಸವನಗೌಡ ಎಂ.ಜಿ. ರಘುರಾಜ ಜೆ. ಮತ್ತು ಡಾ. ಜಯದೇವಪ್ಪ ಜಿ.ಕೆ. ರವರು ಭಾಗವಹಿಸಿದ್ದರು.

❖ ದಿನಾಂಕ 30-12-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕಾಡಜ್ಜಿಯಲ್ಲಿ ನಡೆದ 'ದ್ವೈಮಾಸಿಕ ಕಾರ್ಯಗಾರ' ದಲ್ಲಿ ಶ್ರೀ ಪ್ರಸನ್ನಕುಮಾರ ಎನ್. ರವರು "ಬೇಸಿಗೆ ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ " ಕುರಿತು ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಉಪನ್ಯಾಸ ನೀಡಿರುತ್ತಾರೆ.

❖ ದಿನಾಂಕ 11-11-2009 ರಂದು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಆಯೋಜಿಸಿದ 'New initiatives in rural livelihood system and development research area' ಕಾರ್ಯಾಗಾರದಲ್ಲಿ ಡಾ. ದೇವರಾಜ ಟಿ.ಎನ್. ರವರು ಭಾಗವಹಿಸಿ, ಕಾರ್ಯಕ್ರಮದ ಒಂದು ಭಾಗವನ್ನು ನಿರ್ವಹಿಸುತ್ತಾ, 'ಜೀವ ಸಂಪನ್ಮೂಲ ಸಂಕೀರ್ಣ' ಯೋಜನೆಯ ಅನುಭವವನ್ನು ಹಂಚಿಕೊಂಡರು.

❖ ದಿನಾಂಕ 13 ರಿಂದ 15 ನವಂಬರ್, 2009 ರಂದು ಸಮಾಜಕಾರ್ಯ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ಏರ್ಪಡಿಸಿದ 3 ದಿನಗಳ 'Micro planning' ತರಬೇತಿ ಕಾರ್ಯಕ್ರಮದಲ್ಲಿ ಬಸವನಗೌಡ ಎಂ.ಜಿ. ಮತ್ತು ಕವಿತಾ ಪಿ. ಇವರು ಭಾಗವಹಿಸಿರುತ್ತಾರೆ.

❖ ದಿನಾಂಕ 19-11-2009 ರಿಂದ 22-11-2009 ರವರೆಗೆ ಜಿ.ಕೆ.ವಿ.ಕೆ, ಬೆಂಗಳೂರಿನಲ್ಲಿ ನಡೆದ 'ಕೃಷಿಮೇಳ'ದಲ್ಲಿ ನಮ್ಮ ಕೇಂದ್ರದ ವತಿಯಿಂದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು ಕೇಂದ್ರದ ಕೃಷಿ ಪ್ರದರ್ಶನದಲ್ಲಿ ಸಾವಿರಾರು ರೈತರು, ಮಹಿಳೆಯರು ಮತ್ತು ಶಾಲಾ ಮಕ್ಕಳು ಕೃಷಿ ಹಾಗೂ ಕೃಷಿಯೇತರ ಸಂಬಂಧಿತ ವಿಷಯಗಳ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಪಡೆದಿರುತ್ತಾರೆ.

❖ ರೇಷ್ಮೆ ಕೃಷಿ ತರಬೇತಿ ಕೇಂದ್ರ, ತೋಳಹುಣಸೆ ಇವರು ಆಯೋಜಿಸಿದ ತರಬೇತಿ ಕಾರ್ಯಕ್ರಮದಲ್ಲಿ ಮಣ್ಣಿನ ಮಹತ್ವ ಹಾಗೂ ನಿರ್ವಹಣೆ' ಕುರಿತು ದಿನಾಂಕ 23-11-2009 ಮತ್ತು 14-12-09 ರಂದು ಡಾ. ಪ್ರದೀಪ್ ಹೆಚ್.ಎಂ. ರವರು ಉಪನ್ಯಾಸವನ್ನು ನೀಡಿರುತ್ತಾರೆ.

❖ ದಿನಾಂಕ 4-12-2009 ಮತ್ತು 9-12-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ತರಬೇತಿಯಲ್ಲಿ ಕೇಂದ್ರದ ಡಾ. ಜಯದೇವಪ್ಪ ಜಿ.ಕೆ., ಪ್ರಸನ್ನಕುಮಾರ್ ಎನ್. ಮತ್ತು ಬಸವನಗೌಡ ಎಂ.ಜಿ ರವರು ಭಾಗವಹಿಸಿ, ವಿವಿಧ ಮೇವಿನ ಬೆಳೆಗಳ ಪೋಷಕಾಂಶಗಳ ಮಹತ್ವ', 'ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ', "ಹೈನುಗಾರಿಕೆ ಚಟುವಟಿಕೆಗಳಲ್ಲಿ ರೈತಮಹಿಳೆಯರ ಪಾತ್ರ' ಹಾಗೂ 'ಕೈತೋಟದ ಮಹತ್ವ ಮತ್ತು ನಿರ್ಮಾಣ' ಕುರಿತು ಉಪನ್ಯಾಸ ನೀಡಿದರು.

❖ ದಿನಾಂಕ 7-12-2009 ರಿಂದ 10-12-2009ರ ವರೆಗೆ ಜೆ.ಎಸ್.ಎಸ್. ಕೆ.ವಿ.ಕೆ., ಸುತ್ತೂರಿನಲ್ಲಿ ನಡೆದ ವಾರ್ಷಿಕ ಪರಿಶೀಲನಾ ಸಭೆಯಲ್ಲಿ ಡಾ.ದೇವರಾಜ ಟಿ.ಎನ್. ರವರು ಕೇಂದ್ರ ವಾರ್ಷಿಕ ವರದಿಯನ್ನು ಮಂಡಿಸಿದರು. ರಘುರಾಜ ಜೆ. ರವರು ಸಭೆಯಲ್ಲಿ ಭಾಗವಹಿಸಿದ್ದರು.

❖ ದಾವಣಗೆರೆಯ ಶ್ರೀ ತರಳಬಾಳು ಜಗದ್ಗುರು ಹಿರಿಯ ಪ್ರೌಢಶಾಲೆಯ ಮಕ್ಕಳು 'ಜೇನುಕೃಷಿ' ಮತ್ತು 'ಎರೆಹುಳು ಗೊಬ್ಬರ' ಕುರಿತು ತಾಂತ್ರಿಕ ಮಾಹಿತಿಯನ್ನು ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನಕ್ಕಾಗಿ **ಕೇಂದ್ರದಿಂದ** ನೀಡಲಾಗಿತ್ತು. ವಸ್ತು ಪ್ರದರ್ಶನದಲ್ಲಿ ಮಕ್ಕಳು ಪ್ರಥಮ ಬಹುಮಾನವನ್ನು ಪಡೆದು, ರಾಜ್ಯಮಟ್ಟದ ಪ್ರದರ್ಶನಕ್ಕೆ ಆಯ್ಕೆಯಾಗಿರುತ್ತಾರೆ.

❖ ಕಬ್ಬೂರು ಗ್ರಾಮದ ಸರಕಾರಿ ಹಿರಿಯ ಪ್ರೌಢಶಾಲೆಯ ಮಕ್ಕಳು 'ಮಾನವ ಕಲ್ಯಾಣಕ್ಕಾಗಿ ವಿಜ್ಞಾನ' ಕುರಿತು ತಾಂತ್ರಿಕ ಮಾಹಿತಿಯನ್ನು ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನಕ್ಕಾಗಿ **ಕೇಂದ್ರದಿಂದ** ನೀಡಲಾಗಿತ್ತು. ವಸ್ತು ಪ್ರದರ್ಶನದಲ್ಲಿ ಮಕ್ಕಳು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ.

**ದೂರದರ್ಶನ ಕಾರ್ಯಕ್ರಮಗಳು:** ♦ಸಮತೋಲನ ಪಶು ಆಹಾರ ಪೂರೈಕೆ ಡಾ. ಜಯದೇವಪ್ಪ ಜಿ.ಕೆ. (31-10-2009)

### ಆಕಾಶವಾಣಿ ಭದ್ರಾವತಿಯಿಂದ ಬಿತ್ತರಗೊಂಡ ಕಾರ್ಯಕ್ರಮಗಳು:

♦ ಹಣ್ಣಿನ ಬೆಳೆಗಳಲ್ಲಿ ನೀರು ನಿರ್ವಹಣೆ – ಬಸವನಗೌಡ ಎಂ.ಜಿ. (23-10-2009)
♦ ಸಮತೋಲನ ಆಹಾರದ ಮಹತ್ವ ಕವಿತಾ ಪಿ. (30-10-2009)
♦ ಸಣ್ಣ ರೈತರಿಗೆ ಮೀನುಕೃಷಿ ಒಂದು ಲಾಭದಾಯಕ ಉದ್ದಿಮೆ ಡಾ. ದೇವರಾಜ ಟಿ.ಎನ್. (12-11-2009)

### ಆಕಾಶವಾಣಿ ಚಿತ್ರದುರ್ಗ:

"ತರಳಬಾಳು ಕೃಷಿ ವಿಜ್ಞಾನ ಕೇಂದ್ರ"- ಪರಿಚಯ, ಚಟುವಟಿಕೆಗಳು ಮತ್ತು ಇದುವರೆಗಿನ ಸಾಧನೆಗಳು-ಡಾ. ದೇವರಾಜ ಟಿ.ಎನ್. (26-11-2009)

### ರೈತ ಕ್ಷೇತ್ರ ಪಾಠಶಾಲೆ:



ದಾವಣಗೆರೆ ತಾಲ್ಲೂಕಿನ ಹಳೇ ಬಸಲೇರಿ ಗ್ರಾಮದಲ್ಲಿ 'ಭತ್ತದಲ್ಲಿ ಸಮಗ್ರ ಬೆಳೆ' ನಿರ್ವಹಣೆ ಕುರಿತು ರೈತ ಕ್ಷೇತ್ರ ಪಾಠಶಾಲೆಯನ್ನು ದಿನಾಂಕ 30-10-2009 ರಂದು ಕ್ಷೇತ್ರೋತ್ಸವ ಆಚರಿಸುವುದರೊಂದಿಗೆ ಮುಕ್ತಾಯಗೊಳಿಸಲಾಯಿತು.

### ಕ್ಷೇತ್ರೋತ್ಸವಗಳು



ದಿನಾಂಕ 26-10-2009 ರಂದು ಅಣಜಿಗೆರೆ, ಹರಪನಹಳ್ಳಿ ತಾಲ್ಲೂಕು " ಹತ್ತಿಯಲ್ಲಿ $KNO_3$ ಪ್ರಯೋಗ"




ದಿನಾಂಕ 16-12-2009 ರಂದು ಸಿದ್ದನೂರು ದಾವಣಗೆರೆ ತಾಲ್ಲೂಕು " ಬಾಳೆಯಲ್ಲಿ ಬನಾನಾ ಸ್ಪೇಷಲ್ ಬಳಕೆ ".

### ಕೃಷಿ ಮುನ್ಸೂಚನೆಗಳು:

**ಮಾವು:** ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿ ರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4 ಗ್ರಾಂ ಕಾರ್ಬರಿಲ್ 50 ಡಬ್ಲ್ಯು.ಪಿ. ಅಥವಾ 2.0 ಮಿ.ಲೀ. ಎಂಡೋಸಲ್ಫಾನ್ 35 ಇ.ಸಿ. ಜೊತೆಗೆ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಅಥವಾ 0.5 ಮಿ.ಲೀ. ಡೈನೋಕ್ಯಾಪ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಿ.

**ಅಡಿಕೆ:** ಸಾಮಾನ್ಯವಾಗಿ ಅಡಿಕೆ ಡಿಸೆಂಬರ್ ತಿಂಗಳಿಂದ ಹೂ ಗೊಂಚಲು ಬಿಡುತ್ತದೆ. ಸುಳಿ, ತಿಗಣೆ ಅಥವಾ ಹೂ ಗೊಂಚಲು ತಿನ್ನುವ ಹುಳು ಕಾಣಿಸಿಕೊಂಡಾಗ 2.0 ಮಿ.ಲೀ ಎಂಡೋಸಲ್ಫಾನ್ ಅಥವಾ ಕ್ವಿನಾಲ್‌ಫಾಸ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಸುಳಿ ಸುತ್ತಲಿನ ಎಲೆಗಳ ಬುಡದಲ್ಲಿ ಮೂರು ತಿಂಗಳಿಗೊಮ್ಮೆ 10 ಗ್ರಾಂ ಶೇ.10 ರ ಫೋರೇಟ್ ಹರಳನ್ನು (ರಂಧ್ರವುಳ್ಳ ಚಿಕ್ಕ ಪಾಲಿಥೀನ್ ಹಾಳೆಯಲ್ಲಿರಿಸುವುದು) ಕೊಡುವುದರಿಂದ ಸುಳಿ ತಿಗಣೆ ಬಾಧೆಯನ್ನು ನಿಯಂತ್ರಸಬಹುದು.

**ಓಂಗಾರಿ ಜೋಳ:**

ಕಾಡಿಗೆ ರೋಗ: ರೋಗದ ಲಕ್ಷಣಗಳು ತೆನೆ ಬಿಟ್ಟ ಮೇಲೆ ಕಾಣಿಸುತ್ತವೆ. ತೆನೆಯಲ್ಲಿ ಕಾಳುಗಳು ಕಪ್ಪನೆಯ ಶಿಲೀಂಧ್ರದಿಂದ ತುಂಬಿರುತ್ತವೆ.

ಹತೋಟಿ: ರೋಗಪೀಡಿತ ತೆನೆಗಳ ನಾಶ ಮತ್ತು ಬೀಜೋಪಚಾರ (ನೀರಿನಲ್ಲಿ ಕರಗುವ ಗಂಧಕ ಅಥವಾ ಕ್ಯಾಪ್ಟಾನ್ 2 ಗ್ರಾಂ / ಕೆ.ಜಿ. ಬೀಜ).

**ಕಡಲೆ:**

ಕಾಯಿಕೊರಕ: ಮರಿಗಳು ಪ್ರಾರಂಭದಲ್ಲಿ ಎಲೆಯನ್ನು ಕೆರೆದು ತಿನ್ನುತ್ತವೆ. ನಂತರ ಮೊಗ್ಗು ಮತ್ತು ಕಾಯಿಗಳನ್ನು ಕೊರೆಯುತ್ತವೆ.

ಹತೋಟಿ: ಕಾರ್ಬರಿಲ್ 50 ಡಬ್ಲ್ಯೂ.ಪಿ. 4 ಗ್ರಾಂ/ಲೀ ಅಥವಾ ಫೆನ್‌ವಲ್‌ರೇಟ್ 20 ಇ.ಸಿ. 0.5 ಮಿ.ಲೀ/ಲೀ ಸಿಂಪಡಿಸಬೇಕು.

**ಸೂರ್ಯಕಾಂತಿ:**

ತುದಿಸಾಯುವ ನಂಜುರೋಗ :ಎಲೆ ಒಂದು ಭಾಗ ಸುಟ್ಟು, ಹಳದಿ ಮಿಶ್ರಿತ ಒರಟಾದ ಎಲೆಗಳು ಕಾಣುತ್ತದೆ. ತೆನೆಯ ಹಿಂಭಾಗ ಕಂದು ಬಣ್ಣಕ್ಕೆ ತಿರುಗಿ ಸುಟ್ಟು ಒಣಗುತ್ತದೆ. ಕಾಳು ಜೊಳ್ಳಾಗುತ್ತದೆ.

ಹತೋಟಿ: ಹೊಲದ ಸುತ್ತ ಇರುವ ಕಳೆ ಮತ್ತು ರೋಗಗ್ರಸ್ಥ ಗಿಡಗಳ ನಾಶ ಮಾಡಬೇಕು.

ಬಿತ್ತನೆಯಾದ 20 ಮತ್ತು 40 ದಿನಗಳ ನಂತರ ಕಾನ್ಫಿಡಾರ್ 0.5 ಮಿ.ಲೀ/ಲೀ ಅಥವಾ ಆಕ್ಸಿಡೆಮಟಾನ್ ಮೀಥೈಲ್ 25 ಇ.ಸಿ.. 1.5ಮಿ.ಲೀ./ಲೀ ಗೆ ಬೆರಸಿ ಸಿಂಪಡಿಸಬೇಕು.

ಕಪ್ಪು ತಲೆ ಕಂಬಳಿ ಹುಳು:

ಮರಿಹುಳುಗಳು ಎಲೆಯ ಮೇಲೆ ಗುಂಪಾಗಿದ್ದು ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ.

ಹತೋಟಿ: ಕೈಯಿಂದ ತತ್ತಿಗಳನ್ನು ಆರಿಸಿ ಸೀಮೆ ಎಣ್ಣೆಯಲ್ಲಿ ಹಾಕಿ ಸುಡಬೇಕು.

ಮ್ಯಾಲಥಿಯಾನ್ 8 ಕೆ.ಜಿ./ಎಕರೆಗೆ ಧೂಳೀಕರಿಸಬೇಕು ಅಥವಾ ಕ್ವಿನಾಲ್‌ಫಾಸ್ 25 ಇ.ಸಿ. 2 ಮಿಲೀ/ ಲೀ ಅಥವಾ ಸೈಪರ್ ಮೆಥ್ರಿನ್ 1 ಮಿ.ಲೀ/ಲೀ ಸಿಂಪಡಿಸಬೇಕು.

**ಭತ್ತ:**

- ಭತ್ತದಲ್ಲಿ ಶಿಫಾರಸ್ಸು ಮಾಡಿದ ಗೊಬ್ಬರವನ್ನು ಬಳಸಿ, ಎಕರೆಗೆ 40:20:20 ಎನ್. ಪಿ. ಕೆ. ಕೆ.ಜಿ.
- ಭತ್ತದಲ್ಲಿ ಸಸಿ ಮಡಿ ನಿರ್ವಹಣೆ: ಸಸಿ ಮಡಿಯಲ್ಲಿ ಬೆಳವಣಿಗಾಗಿ 17:17:17 1 ಕೆ.ಜಿ. ಯನ್ನು 100 ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು. ನಾಟಿ ಸಮಯದಲ್ಲಿ ಸಸಿಗಳ ತುದಿಯನ್ನು ಚಿವುಟಿ ನಾಟಿ ಮಾಡಿ, ಕಾಂಡ ಕೊರಕ ಮೊಟ್ಟೆಗಳನ್ನು ನಾಶಮಾಡಬೇಕು
- ಜೈವಿಕ ಗೊಬ್ಬರ: ಅಝೋಸ್ಪೈರಿಲಂ ಜೀವಾಣು ಗೊಬ್ಬರ ಬಳಸುವ ವಿಧಾನ.
- ಎಕರೆ ಪ್ರದೇಶಕ್ಕೆ ಬೇಕಾಗುವ ಬಿತ್ತನೆ ಬೀಜವನ್ನು 400 ಗ್ರಾಂ ಅಝೋಸ್ಪೈರಿಲಂನೊಂದಿಗೆ ಉಪಚರಿಸುವುದು
- 800 ಗ್ರಾಂ ಜೈವಿಕ ಗೊಬ್ಬರವನ್ನು ನೇರವಾಗಿ ಸಸಿ ಮಡಿಯಲ್ಲಿ ಅಥವಾ ನಾಟಿ ಮಾಡುವ ಪ್ರದೇಶಕ್ಕೆ ಎರಚುವುದು.
- ಸಸಿ ಮಡಿಯಿಂದ ಕಿತ್ತ ನಂತರ ಸಸಿ ಬೇರುಗಳನ್ನು 400 ಗ್ರಾಂ ಅಝೋಸ್ಪೈರಿಲಂ ಜೈವಿಕ ಗೊಬ್ಬರದ ಮಿಶ್ರಣದಲ್ಲಿ ಅದ್ದಿ ನಾಟಿ ಮಾಡುವುದು.

**ಬಳಸುವಾಗ ರಸಗೊಬ್ಬರ, ಇರಲಿ ಎಚ್ಚರ**

ಇತ್ತೀಚಿನ ದಿನಗಳಲ್ಲಿ ರಸಗೊಬ್ಬರ ಬಳಸದೇ ಇರುವ ರೈತರು ವಿರಳ, ರಸಗೊಬ್ಬರಗಳನ್ನು ಬಳಸುವಾಗ ಕೆಲವು ಎಚ್ಚರಿಕೆ ಕ್ರಮಗಳನ್ನು ಅನುಸರಿಸುವುದು ಅವಶ್ಯಕ.

- ಗೊಬ್ಬರವನ್ನು ಹೊಲದಲ್ಲಿ ಹಾಕುವವರ ಕೈಯಲ್ಲಿ ಗಾಯಗಳಿದ್ದರೆ, ಬರಿ ಕೈಯಲ್ಲಿ ಗೊಬ್ಬರ ಮುಟ್ಟದೇ ಗ್ಲೌಸನ್ನು ಹಾಕಿಕೊಂಡು ಗೊಬ್ಬರ ಮುಟ್ಟುವುದು.
- ಪುಡಿ ಗೊಬ್ಬರ ಹಾಗೂ ಇನ್ನಿತರ ಗೊಬ್ಬರಗಳನ್ನು ತೂರುವಾಗ ಮೂಗು ಹಾಗೂ ಬಾಯಿಗೆ ಬಟ್ಟೆ ಕಟ್ಟಿಕೊಳ್ಳಿ,
- ಗೊಬ್ಬರವನ್ನು ಹಾಕುವಾಗ ಅದು ಗಿಡಗಳ ಎಲೆಗಳ ಮೇಲೆ ಬಿದ್ದರೆ ಗೊಬ್ಬರ ಬಿದ್ದ ಜಾಗ ಸುಟ್ಟು ಹೋಗಿ ನಂತರ ಎಲೆ ಕೊಳೆಯುವುದು.
- ಗೊಬ್ಬರ ಹಾಕಲು ಬಳಸುವ ವಸ್ತುಗಳನ್ನು ಚೆನ್ನಾಗಿ ತೊಳೆದು ಮತ್ತೆ ಬಳಸಿ.
- ಮಕ್ಕಳು ಗೊಬ್ಬರ ಮುಟ್ಟದಂತೆ ಎಚ್ಚರವಹಿಸಿ.
- ರಾಸಾಯನಿಕ ಗೊಬ್ಬರಗಳನ್ನು ಸಂಗ್ರಹಿಸಿಡಬೇಕಾದಲ್ಲಿ ತೇವಾಂಶವಿಲ್ಲದ ಜಾಗದಲ್ಲಿ ಇಡಬೇಕು. ಗಾಳಿಗೆ ತೆರೆದಿಟ್ಟರೆ ಕೆಲ ಗೊಬ್ಬರಗಳು ಉಂಡೆಯಾಗಿ, ನಂತರ ಬಳಸಲು ಕಷ್ಟವಾಗುತ್ತದೆ.
- ಬಾರಿ ಮಳೆ ಬರುವ ಸೂಚನೆಗಳಿದ್ದರೆ ಗೊಬ್ಬರ ನೀಡಬೇಡಿ, ಹಾಕಿದ ಗೊಬ್ಬರ ನೀರಿನಲ್ಲಿ ಕೊಚ್ಚಿಕೊಂಡು ಹೋಗಬಹುದು.
- ಭತ್ತದ ಗದ್ದೆಗಳಿಗೆ ಗೊಬ್ಬರ ಹಾಕಿದ ನಂತರ, ಗದ್ದೆಯಲ್ಲಿರುವ ನೀರು ಹೊರ ಹೋಗದಂತೆ ನೋಡಿಕೊಳ್ಳಿ,
- ಗೊಬ್ಬರ ಹಾಕಿದ ಜಾಗಕ್ಕೆ ಮತ್ತೆ ಮತ್ತೆ ಗೊಬ್ಬರ ಸುರಿಯಬೇಡಿ, ನಿಗದಿತ ಪ್ರಮಾಣದಲ್ಲಿಯೇ ಗೊಬ್ಬರ ನೀಡುವುದು ಒಳಿತು.

ಅಗತ್ಯವಿರುವಾಗಲೇ ಗೊಬ್ಬರ ನೀಡಬೇಕು. ಬೆಳೆ ಬೆಳೆದ ಮೇಲೆ ಗೊಬ್ಬರ ನೀಡುವುದರಿಂದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಿಲ್ಲ.

**ಪಶು ವಿಜ್ಞಾನ:**

- ಜಾನುವಾರುಗಳಿಗೆ ಕಾಲು ಬಾಯಿ ಜ್ವರಕ್ಕೆ ಚುಚ್ಚು ಮದ್ದು ಹಾಕಿಸಬೇಕು.
- ಹೈನುರಾಸುಗಳಿಗೆ ಉತ್ಪಾದನೆಯನ್ನು ಹೆಚ್ಚಿಸಲು ಅಝೋಲ್ಲಾ ಬೆಳೆದುಕೊಳ್ಳುವುದು ಸೂಕ್ತ
- ಬೇಸಿಗೆಯು ಹತ್ತಿರವಾಗುತ್ತಿರುವುದರಿಂದ, ಹಸಿರು ಮೇವಿನ ಲಭ್ಯತೆ ಕಡಿಮೆ ಇರುವ ಸ್ಥಳಗಳಲ್ಲಿ ಒಣ ಮೇವನ್ನು ಪೌಷ್ಟೀಕರಿಸಿ ರಾಸುಗಳಿಗೆ ನೀಡುವುದು ಉಪಯುಕ್ತ.

**ಮೀನು ಕೃಷಿ:**

- ಈ ಚಳಿಗಾಲದಲ್ಲಿ ಮೀನು ಮರಿಗಳನ್ನು ಹೊಸ ಕೊಳಗಳಿಗೆ ದಾಸ್ತಾನುಮಾಡಬಾರದು. ಹಾಗೆಯೇ, ಚಾಲ್ತಿಯಲ್ಲಿರುವ ಕೊಳಗಳಲ್ಲಿಯೂ ಕೂಡ, ಮೀನುಗಳ ಬೆಳವಣಿಗೆ ನಿಧಾನ ಗತಿಯಲ್ಲಿರುತ್ತದೆ.
- ಮೀನುಗಳಿಗೆ ಚೀಲಗಳ ಮೂಲಕ ಆಹಾರ ನೀಡುವುದು ಒಳ್ಳೆಯ ಕ್ರಮ. ಈ ರೀತಿ ಮಾಡುವಾಗ, ಮೀನುಗಳ ಆಹಾರ ಸೇವನೆಯ ಪರಿಯನ್ನು ಗುರುತಿಸುವುದು ಸುಲಭವಾಗುತ್ತದೆ. ಚಳಿಗಾಲದಲ್ಲಿ ಆಹಾರ ಸೇವನೆ ಸಾಮಾನ್ಯವಾಗಿ ಕಡಿಮೆ ಇರುತ್ತದೆ.
- ಸಗಣಿ ಗೊಬ್ಬರ ಬಳಸಿ, ಕೊಳದ ನೀರಿನಲ್ಲಿ ಪ್ಲಾಂಕ್ಟನ್ ಸಾಂದ್ರತೆಯನ್ನು ಕಾಪಾಡಿಕೊಳ್ಳುವುದು ಪ್ರಮುಖ ಅಂಶವಾಗಿರುತ್ತದೆ.

ಸಂಪಾದಕರು ಮತ್ತು ಪ್ರಕಾಶಕರು : (ಕಾರ್ಯಕ್ರಮ ಸಂಯೋಜಕರು) ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ,
ಎಲ್.ಐ.ಸಿ. ಕಾಲೋನಿ ಲೇ ಔಟ್, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ - 577 004, ಕರ್ನಾಟಕ

ಮುದ್ರಣ : [illegible] ದಾವಣಗೆರೆ. ಫೋ : 253341.